ಸತ್ರ ಪ್ರಕರಣ ಸಂಖ್ಯೆ:

| | |
|---|---|
| ಫ್ರಾಸಾ | 17 |
| ಚಾಸಾ | 21 |

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ:57)
ನಮೂನೆ ಸಂಖ್ಯೆ.4
(ಸಿವಿಲ್)

**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**

**ಸತ್ರ ಪ್ರಕರಣ ಸಂಖ್ಯೆ:47/2024**

**ದಿನಾಂಕ: 07.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಎಂ.ಶ್ರೀನಿವಾಸ |
| ತಂದೆಯ ಹೆಸರು | : | ಲೇಟ್ ಮುನಿಯಪ್ಪ |
| ವಯಸ್ಸು | : | 51 ವರ್ಷ |
| ಉದ್ಯೋಗ | : | ಚೇಳೂರು ವೃತ್ತ ನಿರೀಕ್ಷಕರು |
| ವಾಸಸ್ಥಳ | : | ಚೇಳೂರು |

**ಮುಖ್ಯ ವಿಚಾರಣೆ: ಸಾರ್ವಜನಿಕ ಅಭಿಯೋಜಕರಿಂದ:-**

**1.** ನಾನು ದಿನಾಂಕ 25.10.2023 ರಿಂದ 18.11.2025 ರವರೆಗೆ ಶಿಡ್ಲಘಟ್ಟ ವೃತ್ತ ನಿರೀಕ್ಷಕರಾಗಿ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನು.

2. ದಿನಾಂಕ 25-10-2023 ರಂದು ಚಾಸಾ-20 ಸಿಪಿಐ ನಂದಕುಮಾರ ರವರಿಂದ ಕಡತವನ್ನು ಪಡೆದು ಪರಿಶೀಲಿಸಿರುತ್ತೇನೆ. ದಿ.20-12-2023 ರಂದು ಎಫ್.ಎಸ್.ಎಲ್ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಎಫ್.ಎಸ್.ಎಲ್ ವರದಿ ಹಾಗೂ ಎಫ್.ಎಸ್.ಎಲ್‌ನ ಪಾರ್ ವರ್ಡಿಂಗ್ ಲೆಟರ್ ನ್ನು ನೋಡಿ ಗುರುತಿಸಿದ್ದು, ಎಫ್.ಎಸ್.ಎಲ್ ವರದಿಯನ್ನು ಈಗಾಗಲೇ ನಿಪಿ-14 ಎಂದು ಗುರುತಿಸಲಾಗಿದ್ದು, ಎಫ್.ಎಸ್.ಎಲ್ ನ ಪಾರ್ ವರ್ಡಿಂಗ್ ಲೆಟರ್ ನ್ನು ನಿಪಿ-18 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-18(ಎ) ಮತ್ತು ನಿಪಿ-14 ರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ14(ಎ) ಎಂದು ಗುರುತಿಸಲಾಯಿತು. ನಂತರ ದಿ.21-12-2023 ರಂದು ನೊಂದ ಮಹಿಳೆ ದಿ.10-06-2023 ರಂದು ಸುಮ ನರ್ಸಿಂಗ್ ಹೋಂ. ನಿಂದ ಚಿಕಿತ್ಸೆ ಪಡೆದ ಬಗ್ಗೆ ದಾಖಲಾತಿ ಒದಗಿಸುವಂತೆ ಮನವಿ ಪತ್ರವನ್ನು ಸಲ್ಲಿಸಿದ್ದೆ. ಸದರಿ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸದರಿ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-19 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-19(ಎ) ಎಂದು ಗುರುತಿಸಲಾಯಿತು. ನಂತರ ದಿ.22-12-2023 ರಂ ದು ಸುಮ ನರ್ಸಿಂಗ್ ಹೋಂ. ನ ವೈದ್ಯರಾದ ಡಾ.ಮುನಿವೆಂಕಟರೆಡ್ಡಿ ರವ ರಿಂದ ನೊಂದ ಮಹಿಳೆಯು ತನ್ನ ಆಸ್ಪತ್ರೆಯಲ್ಲಿ ಯಾವುದೇ ಚಿಕಿತ್ಸೆ ಪಡೆದುಕೊಂಡಿಲ್ಲ ಎಂದು ವರದಿ ನೀಡಿರುತ್ತಾರೆ. ಅದನ್ನು ಪಡೆದು ನಾನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನೋಡಿದರೆ ಗುರುತಿಸುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅದನ್ನು

ಈಗಾಗಲೇ ನಿಡಿ-1 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದೇ ದಿವಸ ಶಿಡ್ಲಘಟ್ಟ ಸರ್ಕಾರಿ ಆಸ್ಪತ್ರೆ ಡಾ.ಭಾವನಾ ರವರ ಎಫ್ ಎಸ್ ಎಲ್ ವರದಿಯನ್ನು ಆಧರಿಸಿ ನೊಂದ ಮಹಿಳೆ ವೈದ್ಯಕೀಯ ಅಂತಿಮ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನೋಡಿದರೆ ಗುರುತಿಸುತ್ತೇನೆ. ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿರುತ್ತದೆ. ಅದರಲ್ಲಿರುವ ಸಾಕ್ಷಿಯು ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು. ಅದೇ ದಿವಸ ತನಿಖೆಯನ್ನು ಪೂರೈಸಿ ಆರೋಪಿಯ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ಕಲಂ 312 ಐಪಿಸಿ ಯನ್ನು ಕೈ ಬಿಟ್ಟು ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಎ ಕೆ ವಕೀಲರಿಂದಃ</u>**

ನಿಪಿ-14 ಮತ್ತು ನಿಪಿ-15 ನ್ನು ಪಡೆಯುವ ಪೂರ್ವದಲ್ಲಿ ನಿಪಿ-10 ಕಡತದಲ್ಲಿ ಇತ್ತಾ, ಎಂದರೆ ಸಾಕ್ಷಿಯು ಇತ್ತು ಎಂದು ನುಡಿಯುತ್ತಾರೆ. ಸುಮ ನರ್ಸಿಂಗ್ ಹೋಂ. ವೈದ್ಯರು ನೀಡಿದ್ದ ವರದಿ ಆಧಾರದ ಮೇಲೆ ನೊಂದ ಮಹಿಳೆಯ ಮುಂದುವರೆದ ಹೇಳಿಕೆಯನ್ನು ನಾನು ಪಡೆದುಕೊಳ್ಳಲಿಲ್ಲ. ಆರೋಪಿಯ ವಿರುದ್ಧ ಯಾವುದೇ

| | |
|---|---|
| ಫ್ರಾಸಾ | 17 |
| ಚಾಸಾ | 21 |

ಆರೋಪ ಕಂಡುಬರದೇ ಇದ್ದರೂ ಸಹ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

**(ದಿನಾಂಕಃ07.02.2026 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಕಾಂತರಾಜು.ಎಸ್.ವಿ.)**
**2 ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ (ಕಾರ್ಯಸ್ಥಾನ ಚಿಂತಾಮಣಿ)**